# ಮದುವೆಯಾದರೆ ತಪ್ಪೇನಿಲ್ಲ, ಆದರೆ...



**ಪ್ರತಿಮಾ ಠಾಕೂರ್**
ಕಲರ್ಸ್ ಕನ್ನಡದ 'ಮುದ್ದುಸೊಸೆ' ವಿದ್ಯಾ

**◆ ಮದುವೆ–ಶಿಕ್ಷಣ ಎಂಬ ಸಂಘರ್ಷವನ್ನು ಎದುರಿಸಿದ ಸಂದರ್ಭ ಹೇಗಿತ್ತು?**

ಈ ಕಥೆಯನ್ನು ಮೊದಲು ಕೇಳಿದಾಗ ಏಕೋ ಏನೋ ಗೊತ್ತಿಲ್ಲ, ಮನಸ್ಸಿಗೆ ತುಂಬ ಹತ್ತಿರವಾಯಿತು. ಅದರಲ್ಲೂ ನಾನು ನಿರ್ವಹಿಸಬೇಕಾದ ಪಾತ್ರ ತುಂಬ ಇಷ್ಟ ಆಯಿತು. ಅದಕ್ಕೆ ಇದನ್ನು ತಕ್ಷಣ ಒಪ್ಪಿಕೊಂಡೆ. ಪ್ರತಿಯೊಬ್ಬರಿಗೂ ಶಿಕ್ಷಣವೇ ಮೊದಲಾಗಬೇಕು. ಅದುವೇ ಮುಖ್ಯ ಆಗಬೇಕು ಎನ್ನುವುದು ವಿದ್ಯಾಳಾದ ನನ್ನ ಒತ್ತಾಸೆ. ಎಲ್ಲರಿಗೂ ಶಿಕ್ಷಣವೇ ಅವಶ್ಯ. ಈ ಪಾತ್ರ ನಿರ್ವಹಿಸುವ ನನಗೆ ದೊಡ್ಡ ಡಾಕ್ಟರ್ ಆಗಬೇಕು ಎನ್ನುವುದು ಕನಸು. ಹಾಗೆಂದು ಮದುವೆ ಆಗುವುದು ತಪ್ಪು ಎಂದು ಹೇಳಲ್ಲ. ಅದಕ್ಕೂ ಒಂದು ನಿರ್ದಿಷ್ಟ ಸಮಯ ಅನ್ನುವುದು ಬರುತ್ತದೆ. ಆಗ ಆದರೆ ಮಾತ್ರ ಅದು ಸರಿ ಎನ್ನುವ ನಿಲುವು ಇದೆ. ಇದೇ ಕಾರಣಕ್ಕೆ ನನ್ನ ಗುರಿಯತ್ತಲೇ ದೃಷ್ಟಿ ನೆಟ್ಟಿದ್ದೇನೆ. ನಾನು ದುಡಿಯಬೇಕು ನಮ್ಮ ಅಪ್ಪ ಮಾಡಿರುವ ಸಾಲವನ್ನೆಲ್ಲ ತೀರಿಸಬೇಕು. ಮನೆಯ ಕಷ್ಟವನ್ನೆಲ್ಲ ದೂರ ಮಾಡಿ ಎಲ್ಲ ಸುಖವಾಗಿ ಇರಬೇಕು ಎನ್ನುವುದಕ್ಕೆ ಹೋರಾಡುತ್ತೇನೆ.

**◆ ನಟನೆಗೆ ಬಂದ ಹಿನ್ನೆಲೆಯನ್ನು ಒಮ್ಮೆ ನೆನಪಿಸಿಕೊಳ್ಳಬಹುದಾ?**

ನಾನು ನಟನೆಗೆ ಬರಲು ಕಾರಣ ಆದವರು ಕಲಾವಿದ ಸಾಯಿಪ್ರಕಾಶ್. ನಮ್ಮ ತಂದೆ ಚಂದ್ರಕುಮಾರ್ ಮೊದಲು ಅಭಿನಯವನ್ನು ಮಾಡುತ್ತಿದ್ದರು. ಯಾವುದೋ ಕೆಲಸದ ಸಂಬಂಧ ನನ್ನ ಅಪ್ಪ ತಮ್ಮ ಜೊತೆ ನನ್ನನ್ನೂ ಕರೆದುಕೊಂಡು ಹೋಗಿದ್ದರು. ಆಗ ನನ್ನನ್ನು ನೋಡಿದ ಸಾಯಿಪ್ರಕಾಶ್, 'ನೋಡಮ್ಮ ನೋಡಲು ಅಂದವಾಗಿ ಕಾಣ್ತೀಯಾ, ನಟನೆ ನಿನಗೆ ಸೂಕ್ತ ಆಗಬಹುದು. ಒಮ್ಮೆ ಆ ಬಗ್ಗೆ ಯೋಚಿಸಿ ನೋಡು' ಎಂದು ಹೇಳಿದರು. ಅವರು ಹೇಳಿದರು ಎನ್ನುವ ಕಾರಣಕ್ಕಾಗಿ ನಟನೆಯ ತರಗತಿಗೆ ಸೇರಿದೆ. ಭರತನಾಟ್ಯ ಅಭ್ಯಾಸ ಮಾಡಿದೆ. ಅಲ್ಲಿಂದ ಹಂತ ಹಂತವಾಗಿ ಅಭಿನಯವನ್ನು ನನ್ನದಾಗಿಸಿಕೊಳ್ಳುತ್ತಾ ಬಂದಿದ್ದೇನೆ. ಮೊದಲು ಅವರದ್ದೇ ಜಾಹೀರಾತು ಒಂದಕ್ಕೆ ಬಣ್ಣ ಹಚ್ಚಿದೆ. ನಂತರ ಸಿನಿಮಾ ಮಾಡಿದೆ. ಆಲ್ಬಮ್ ಸಾಂಗ್, ಶಾರ್ಟ್‌ಮೂವಿ, ಧಾರಾವಾಹಿಗಳಲ್ಲಿ ಮಾಡುತ್ತಿದ್ದೇನೆ.

**◆ ಬಾಲ್ಯದಲ್ಲಿ ನಿಮ್ಮ ಕನಸು ಏನಾಗಿತ್ತು?**

ಹೀಗೇ ಆಗಬೇಕು ಎನ್ನುವ ಯಾವ ಕಲ್ಪನೆ ಇರಲಿಲ್ಲ. ಭವಿಷ್ಯತ್ತಿನ ಬಗ್ಗೆ ಯಾವ ಕನಸನ್ನೂ ಕಂಡಿರಲಿಲ್ಲ. ಬಹುಶಃ 7ನೇ ತರಗತಿಯಲ್ಲಿ ಇರಬೇಕು ಎಂದು ಅನ್ನಿಸುತ್ತದೆ. ಸಾಯಿಪ್ರಕಾಶ್ ಅವರನ್ನು ಭೇಟಿಯಾದ ನಂತರವೇ ಕನಸು ಮೂಡಿತು. ಏನಾದರೂ ಮಾಡಬಹುದು ಎಂದು ಅನ್ನಿಸತೊಡಗಿತು. ಆದರೆ ನಾಯಕಿ ಆಗಿ ನಟಿಸಬೇಕು ಎನ್ನುವ ಆಸೆ ಮೂಡಿತು. ನಟನೆಯ ಬಗ್ಗೆ ಪ್ರೀತಿಯೂ ಹೆಚ್ಚಾಯಿತು.

**◆ ಈ ಕ್ಷೇತ್ರದ ಸವಾಲನ್ನು ಎದುರಿಸುವ ಬಗ್ಗೆ ನಿಮ್ಮ ಯೋಚನೆಗಳೇನು?**

ನಮ್ಮ ಬೆಳವಣಿಗೆ ನಮ್ಮನ್ನೇ ಆಧರಿಸಿರುತ್ತದೆ. ಯಾವ ಕಥೆಯನ್ನು ಆಯ್ಕೆ ಮಾಡಿಕೊಳ್ಳುತ್ತೇವೆ ಎನ್ನುವುದೂ ಮುಖ್ಯ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ 'ದೊರೆಸಾನಿ'ಯ ಪಾತ್ರಕ್ಕೆ ತಕ್ಕಂತೆ ನಾನಿದ್ದೆ. ಅದು ನನಗೆ ಸೂಕ್ತ ಆಯಿತು. ನಂತರ 'ಅಂತರಪಟ'ದಲ್ಲಿ ನೆಗೆಟಿವ್ ಪಾತ್ರ ಮಾಡಿದೆ. ನಟಿಸುವ ನಮಗೆ ಪಾತ್ರ ಇಷ್ಟ ಆಗಬೇಕು. ಭಿನ್ನ ಭಿನ್ನ ಪಾತ್ರಗಳನ್ನು ನಿರ್ವಹಿಸಬೇಕು. ಅದು ನಮ್ಮ ಬೆಳವಣಿಗೆಗೆ ಸಹಜವಾಗಿ ಸಹಕಾರಿಯಾಗಿರುತ್ತದೆ. ಅನಿಶ್ಚಿತ ಎನ್ನುವ ಸಂದರ್ಭ ಎನ್ನುವುದನ್ನು ನಾನು ಎದುರಿಸಿಲ್ಲ. ಅಂತಹ ಸಂದರ್ಭ ಬಂದಾಗಲೇ ಅದಕ್ಕೆ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬಹುದು ಎಂದು ಭಾವಿಸಿದ್ದೇನೆ.

**◆ ಬಣ್ಣ ಹಚ್ಚಿದ ದಿನಗಳನ್ನು ನೆನಪಿಸುವುದಾದರೆ...**

ಆ ಸಂದರ್ಭವನ್ನು ಮರೆಯಲು ಸಾಧ್ಯವೇ ಇಲ್ಲ. ನಟನೆಗೆ ಸಜ್ಜುಗೊಂಡ ನಂತರ ಮೊದಲು ಬಣ್ಣ ಹಚ್ಚಿದ್ದು ಆ್ಯಡ್ ಶೂಟ್‌ಗೆ. ದೊಡ್ಡ ಕ್ಯಾಮೆರಾ ಎದುರಿಸಿದ ಅನುಭವ ಚೆನ್ನಾಗಿತ್ತು. ಅವತ್ತಿನ ನನ್ನ ಮನೋಮಿಡಿತ ದೇಹದ ಕಂಪನ ಬೇರೆಯೇ ರೀತಿ ಇತ್ತು ಎಂದು ಈಗಲೂ ಅನ್ನಿಸುತ್ತದೆ. ಅದೃಷ್ಟಕ್ಕೆ ನನಗೆ ತಕ್ಕಂತಹ ಪಾತ್ರಗಳು ಸಿಕ್ಕಿವೆ. 'ಮುದ್ದುಸೊಸೆ'ಯ ವಿದ್ಯಾಳ ಪಾತ್ರ ನನ್ನ ಭವಿಷ್ಯದ ಕನಸುಗಳಿಗೆಲ್ಲ ಇಂಬು ಕೊಡುವಂತಿದೆ.

**◆ ಕಿರುತೆರೆಯ ನಿಮ್ಮ ಅನುಭವ ಹೇಳಿ?**

ಮೊದಲು ಈ ಕ್ಷೇತ್ರಕ್ಕೆ ಬಂದಾಗ ಭಯ ಅನ್ನುವುದು ಇತ್ತು. ಜನ ಹೇಗೆ ಸ್ವೀಕರಿಸುತ್ತಾರೋ ಎನ್ನುವ ಆತಂಕವೂ ಇತ್ತು. 'ದೊರೆಸಾನಿ' ನಂತರ ಜನ ನನ್ನನ್ನು ಗುರುತಿಸುವುದನ್ನು ಕಂಡು ಖುಷಿ ಆಯಿತು. ಕೆಲವೊಮ್ಮೆ ನನ್ನ ಧ್ವನಿಯನ್ನು ಕೇಳಿಯೇ ಕೆಲವರು ಮಾತನಾಡಿಸಿದ್ದಾರೆ.

■ **ರಾಘವೇಂದ್ರ ಕೆ.**